# ಹೊಸತು

## ಪರ್ಗೋ ಇಂಟೀರಿಯರ್

ಒಳಾಂಗಣ ವಿನ್ಯಾಸಕ್ಕೆ ಬಳಸಲು ಅನುಕೂಲವಾಗುವ ಪರ್ಗೋ ಇಂಟೀರಿಯರ್ ಮಾರುಕಟ್ಟೆಗೆ ಪ್ರವೇಶಿಸಿದೆ.



ಕಚೇರಿ ಮತ್ತು ಮನೆಯ ಅಗತ್ಯಕ್ಕೆ ಅನುಗುಣವಾಗಿ ಹಲವು ವಿನ್ಯಾಸ ಮತ್ತು ಮಾದರಿ, ಬಣ್ಣಗಳ ಆಯ್ಕೆ ಈ ಸಂಗ್ರಹದಲ್ಲಿವೆ.

ಗುಣಮಟ್ಟದ ಉತ್ಪನ್ನ ಇದಾಗಿದ್ದು, ಹಗುರ ಮತ್ತು ಜೋಡಣೆ ಸುಲಭ ಎಂದು ಕಂಪೆನಿ ಹೇಳಿದೆ.

ಮಾಹಿತಿಗೆ : 022-26434448

## ಪ್ಯಾರಮೌಂಟ್ ದಿಂಬು

ಪ್ಯಾರಮೌಂಟ್ ಇದೀಗ ಆರ್ಥೋ ಪ್ಲಸ್ ಎಂಬ ಆರಾಮದಾಯಕ ದಿಂಬುಗಳನ್ನು ಪರಿಚಯಿಸಿದೆ. ಈ ದಿಂಬು ಬಳಸುವುದರಿಂದ ಆರೋಗ್ಯಕ್ಕೆ ಉತ್ತಮ ಎಂದು ಕಂಪೆನಿ ಹೇಳಿದೆ.

ಬೆನ್ನಿಗೆ ಉತ್ತಮ ಆಧಾರದ ಜೊತೆಗೆ ಇದು ಆಯಾಸವನ್ನು ಪರಿಹರಿಸುತ್ತದೆ. ದಿಂಬನ್ನು ವೈಜ್ಞಾನಿಕವಾಗಿ ವಿನ್ಯಾಸ ಮಾಡಿದ್ದು, ಯಾವುದೇ ರೀತಿಯ ಕಿರಿಕಿರಿಯೆನಿಸುವುದಿಲ್ಲ.

ಇದರ ಹೊರ ಬಟ್ಟೆಯನ್ನು ಒಗೆಯಬಹುದಾಗಿದ್ದು, ಕೊಳೆಯ ಬಗ್ಗೆ ಚಿಂತೆ ಮಾಡಬೇಕಾಗಿಲ್ಲ.



ಬೆಲೆ 1900 ರೂಪಾಯಿಗಳಿಂದ ಆರಂಭ.

ಮಾಹಿತಿಗೆ: 9320034334

## ಸ್ಯಾಮ್‌ಸಂಗ್ ಟೈಝುನ್ ಸ್ಮಾರ್ಟ್ ಟಿವಿ

ಸ್ಯಾಮ್‌ಸಂಗ್ ತನ್ನ ಹೊಸ ಮಾದರಿಯ ಸ್ಮಾರ್ಟ್ ಟಿವಿಗಳಲ್ಲಿ ಆ್ಯಂಡ್ರಾಯ್ಡ್ ಬದಲಾಗಿ ಟೈಝುನ್ ಸಾಫ್ಟ್‌ವೇರ್ ಹೊಂದಿದ ಸ್ಮಾರ್ಟ್ ಟಿವಿಗಳನ್ನು ಮಾರುಕಟ್ಟೆಗೆ ಪರಿಚಯಿಸಿದೆ. ಸ್ಮಾರ್ಟ್ ಆ್ಯಪ್ಸ್, ಲೈವ್ ಟಿವಿ ಮತ್ತು 4K ಚಿತ್ರ ವೀಕ್ಷಣೆ ಇದರ ವಿಶೇಷ. ಬಾಗಿದ ವಿನ್ಯಾಸದ ಈ ಟಿವಿಗಳಲ್ಲಿ 250 ಜಿಬಿ ಮತ್ತು 500 ಜಿಬಿ ಮೆಮೊರಿ ಸಾಮರ್ಥ್ಯದೊಂದಿಗೆ 48 ಇಂಚಿನಿಂದ 88 ಇಂಚಿನವರೆಗಿನ ಮಾದರಿಗಳಿವೆ.



ವಿವರಗಳಿಗೆ : www.samsung.com

## ಪಾರ್ಟಿ ಗ್ಲೋ ಫೇಶಿಯಲ್

ಟಿಬಿಸಿ ಬೈ ನೇಚರ್ ಇದೀಗ ತ್ವಚೆಯ ಬಗ್ಗೆ ಕಾಳಜಿ ವಹಿಸುವ ಮಹಿಳೆಯರಿಗಾಗಿ ಪಾರ್ಟಿ ಗ್ಲೋ ಫೇಶಿಯಲ್ ಕಿಟ್ ಹೊರತಂದಿದೆ. ಇದನ್ನು ಬಳಸುವುದರಿಂದ ಚರ್ಮದಲ್ಲಿ ನೆರಿಗೆ ಉಂಟಾಗುವುದು ಮತ್ತು ಸುಕ್ಕಾಗುವುದನ್ನು ತಡೆಯಬಹುದು ಎಂದು ಕಂಪೆನಿ ಹೇಳಿದೆ.

ಚರ್ಮದ ಕಾಂತಿ ಮತ್ತು ತಾಜಾತನ ಉಳಿಸಿಕೊಳ್ಳಲು ಇದು ಸಹಕಾರಿ. 55 ಗ್ರಾಂ ಪ್ಯಾಕ್ ಬೆಲೆ 200 ರೂಪಾಯಿ.

ವಿವರಗಳಿಗೆ : www.tbcbynature.com




## ತನಿಷ್ಕ್ ಮಿಯಾ ಸಂಗ್ರಹ

ಸೌಂದರ್ಯ ಆಭರಣ ತಯಾರಕ ಸಂಸ್ಥೆ ತನಿಷ್ಕ್ ಮಿಯಾ ಸಂಗ್ರಹವನ್ನು ಪರಿಚಯಿಸಿದೆ. 14 ಕ್ಯಾರೆಟ್ ಚಿನ್ನದಿಂದ ತಯಾರಿಸಿದ್ದು, ಹಗುರವಾಗಿದೆ.

ವಿವಿಧ ಆಕರ್ಷಕ ವಿನ್ಯಾಸದ ಉಂಗುರಗಳು, ಬ್ರೇಸ್‌ಲೆಟ್ಸ್, ಕಿವಿಯೋಲೆ ಮತ್ತು ಪೆಂಡೆಂಟ್‌ಗಳು ಈ ಸಂಗ್ರಹದಲ್ಲಿವೆ.

ಹಲವು ಬಣ್ಣದ ಹರಳುಗಳ ಆಯ್ಕೆಯೊಂದಿಗೆ ಮಹಿಳೆಯರಿಗೆ ಇಷ್ಟವಾಗುವ ಮತ್ತು ದಿನನಿತ್ಯದ ಬಳಕೆಗೆ ಇದು ಸೂಕ್ತವಾಗಿದ್ದು ಎಂದು ತನಿಷ್ಕ್ ಹೇಳಿದೆ.

ಬೆಲೆ 3,999 ರೂಪಾಯಿಗಳಿಂದ ಆರಂಭ.

ವಿವರಗಳಿಗೆ : www.tanishq.co.in



## ಎಲ್‌ಜಿ ಜಿ ಫ್ಲೆಕ್ಸ್ 2

ಎಲ್‌ಜಿ ತನ್ನ ಸ್ಮಾರ್ಟ್‌ಫೋನ್ ಸರಣಿಯಲ್ಲಿ ಜಿ ಫ್ಲೆಕ್ಸ್ 2 ಮಾದರಿಯನ್ನು ಬಿಡುಗಡೆ ಮಾಡಿದೆ. 5.5 ಇಂಚಿನ ಸ್ಪರ್ಶ ಸಂವೇದಿ ತೆರೆ, 2 ಗಿಗಾಹರ್ಟ್ಸ್ ಪ್ರೊಸೆಸ್ಸರ್, 2 ಜಿಬಿ ರ್‍ಯಾಮ್ ಮತ್ತು 16 ಜಿಬಿ ಮೆಮೊರಿ ಸಾಮರ್ಥ್ಯ ಹೊಂದಿದೆ. 2.1 ಮೆಗಾಪಿಕ್ಸೆಲ್ ಸೆಲ್ಫಿ ಕ್ಯಾಮೆರಾ ಮತ್ತು 13 ಮೆಗಾಪಿಕ್ಸೆಲ್ ಹಿಂಬದಿ ಕ್ಯಾಮೆರಾ ಇದರಲ್ಲಿದೆ.




ಆ್ಯಂಡ್ರಾಯ್ಡ್ 5.0 ಲಾಲಿಪಾಪ್ ಸಾಫ್ಟ್‌ವೇರ್, 3000 ಎಂಎಹೆಚ್ ಬ್ಯಾಟರಿ ಇದ್ದು, ಬಾಗಿದ ವಿನ್ಯಾಸದಿಂದಾಗಿ ಕೈಯಿಂದ ಜಾರುವುದಿಲ್ಲ.

ವಿವರಗಳಿಗೆ : www.lg.com